<u>ಅಸಲು ದಾವಾ ಸಂಖ್ಯೆಃ **147/2018**</u> ಡಿ.ಡಬ್ಲ್ಯೂ:- **1**

ದಿನಾಂಕಃ **02-03-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ವಾದಿ ಮತ್ತು ವಾದಿಯ ಕುಟುಂಬದವರು ಗೊತ್ತು. ವಾದಿಯು ಸರ್ವೆ ನಂ.164/3 ರಲ್ಲಿರುವ 1 ಎಕರೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿಯ ಕುಟುಂಬದಲ್ಲಿ ಭಾಗಾಂಶ ಆಗಿಲ್ಲ ಎಂದರೆ ಸಾಕ್ಷಿಯು ಬಾಯಿ ಮಾತಿನ ಮೇರೆಗೆ ಭಾಗಾಂಶವನ್ನು ಮಾಡಿಕೊಂಡಿದ್ದಾರೆ ವಿನಃ ದಾಖಲೆಯ ಮೂಲಕ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ವಾದಿಯ ಕುಟುಂಬದವರು ಭಾಗಾಂಶವನ್ನು ಪತ್ರದಲ್ಲಿ ಮಾಡಿಕೊಂಡಿರುವ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ವಾದಿಯ ತಂದೆಯವರು ಒಟ್ಟು 6 ಜನ ಅಂದರೆ ರತ್ನಮ್ಮ, ಇನ್ನೊಬ್ಬ ರತ್ನಮ್ಮ, ಗಣೇಶಚಾರಿ, ಶಾಮಾಚಾರಿ, ನೀಲಚಾರಿ ಮತ್ತು ಇಂದ್ರಮ್ಮ. ಗಣೇಶಚಾರಿ ಈಗ ತೀರಿಕೊಂಡಿರುತ್ತಾರೆ. ಗಣೇಶಚಾರಿ ಈಗ್ಗೆ 10-12 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ರತ್ನಮ್ಮ ಎಂಬುವವರು ಅಸಲು ದಾವಾ ಸಂ.138/2009 ರ ದಾವೆಯನ್ನು ಗಣೇಶಚಾರಿ ಮತ್ತು ಅವರ ಅಣ್ಣ ತಮ್ಮಂದಿರ ವಿರುದ್ಧ ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಕಂಡ ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾ ಆಸ್ತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಮತ್ತು ರತ್ನಮ್ಮರವರು ಶಾಮೀಲಾಗಿ ಮತ್ತು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸದರಿ ಮೇಲ್ಕಂಡ ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾ ಆಸ್ತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ವಾದಿಯ ಕುಟುಂಬದ ಬಗ್ಗೆ ನನಗೆ 35-40 ವರ್ಷಗಳಿಂದ ಗೊತ್ತು. ವಾದಿಯ ಕುಟುಂಬದಲ್ಲಿ ಏನು ಏನು ವ್ಯವಹಾರ ಆಗಿದೆ ಎಂಬ ಬಗ್ಗೆ ನನಗೆ ಗೊತ್ತು. ಗಣೇಶಚಾರಿ ಮತ್ತು ಅವರ ಅಣ್ಣ ತಮ್ಮಂದಿರಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿಯಲ್ಲ. ಗಣೇಶಚಾರಿ ಮತ್ತು ಅವರ ಅಣ್ಣ ತಮ್ಮಂದಿರಿಗೆ ಓದು ಬರಹ ಬರದಿದ್ದರೂ ಸಹ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಗಣೇಶಚಾರಿ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ

ವಿಶ್ವಾಸದಲ್ಲಿದ್ದೆನು ಎಂದರೆ ಸರಿ. ಗಣೇಶಚಾರಿ ಮತ್ತು ಅವರ ಅಣ್ಣ ತಮ್ಮಂದಿರು ಅವರ ಕುಟುಂಬದಲ್ಲಿ ಯಾವುದೇ ಒಂದು ವಿಚಾರದಲ್ಲಿ ಏನಾದರೂ ತೀರ್ಮಾನ ತೆಗೆದುಕೊಳ್ಳುವ ಪೂರ್ವದಲ್ಲಿ ನನ್ನ ಜೊತೆ ಚರ್ಚೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗಣೇಶಚಾರಿ ತೀರಿಕೊಂಡ ನಂತರ ಕುಟುಂಬದ ಎಲ್ಲಾ ವ್ಯವಹಾರಗಳನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ವಾದಿಯು ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುವ ಸಮಯದಲ್ಲಿ ರತ್ನಮ್ಮರವರು ಸಲ್ಲಿಸಿದ ಅಸಲು ದಾವಾ ಸಂ.138/2009 ರ ದಾವೆಯು ಕೊನೆಯ ಹಂತಕ್ಕೆ ಬಂದಿತ್ತು ಎಂದರೆ ಸರಿ. ವಾದಿಗೆ 2018 ರಲ್ಲಿ ನೋಟೀಸನ್ನು ಪಡೆದುಕೊಂಡ ನಂತರ ಮೇಲ್ಕಂಡ ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾ ಆಸ್ತಿಯನ್ನು ಸೇರಿಸಿಲ್ಲ ಎಂಬ ವಿಚಾರ ತಿಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೇಲ್ಕಂಡ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ 2018 ರಲ್ಲಿ ನಿಮಗೆ ಬರೆದುಕೊಟ್ಟಿರುವ ಕ್ರಯ ಪತ್ರದ ವಿಚಾರ ತಿಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2009 ನೇ ಸಾಲಿನಲ್ಲಿ ಶಾಮಾಚಾರಿ ಮಗ ಶಿವರಾಜಚಾರಿ ಅಸಲು ದಾವಾ ಸಂ.180/2009 ರ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ವಜಾಗೊಂಡಿರುತ್ತದೆ. ದಿಃ 20-10-2006 ರಂದು ವಾದಿಯನ್ನು ನಾನು ಹೊನ್ನಾಳಿ ಉಪನೋಂದಣಿ ಕಚೇರಿಗೆ ಕರೆದುಕೊಂಡು ಹೋಗಿರುತ್ತೇನೆ. ವಾದಿಗೆ ಓದಲು ಬರೆಯಲು ಬರುವುದಿಲ್ಲ ಮತ್ತು ಅವರನ್ನು ಸಾಕ್ಷಿದಾರನಾಗಿ ಎಂದು ಹೇಳಿ ಕರೆದುಕೊಂಡು ಹೋಗಿ ಮೋಸದಿಂದ ಕ್ರಯ ಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ವಾದಿಗೆ ತಿಳಿಯದಂತೆ ಶುದ್ಧ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಿಃ 12-02-2018 ರಂದು ವಾದಿಗೆ ನಾನು ಗಣೇಶಚಾರಿ, ಶಾಮಾಚಾರಿ, ನೀಲಾಚಾರಿ, ರತ್ನಮ್ಮ, ಇನ್ನೊಬ್ಬ ರತ್ನಮ್ಮ, ಇಂದ್ರಮ್ಮರವರಿಂದ ಮೋಸದಿಂದ ಮಾಡಿಕೊಂಡಿರುವ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಮೇಲ್ಕಂಡರವರಿಂದ ಮೋಸದಿಂದ ಮಾಡಿಕೊಂಡಿದರಿಂದ ವಾದಿಯು ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿ, ಗಣೇಶಚಾರಿ, ಶಾಮಾಚಾರಿ, ವೀರಾಚಾರಿ, ರತ್ನಮ್ಮ, ಇನ್ನೊಬ್ಬ ರತ್ನಮ್ಮ, ಇಂದ್ರಮ್ಮರವರನ್ನು ಹೊರತುಪಡಿಸಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನಾನುಭವದಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರಸ್ತುತ ವಾದಿಯೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ

ವಾದಿ ಮತ್ತು ಅವರ ಅಣ್ಣ ತಮ್ಮಂದಿರೇ ಮಾಲೀಕರು ಹೊರತು ನನಗೆ ಯಾವುದೇ ವಾಲೀಕತ್ವದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಕೆ ಸಿ ರಾಮಪ್ಪರವರ ಜಮೀನು, ಪಶ್ಚಿಮಕ್ಕೆ ಭೂ ದಾನ ಜಮೀನು, ಉತ್ತರ ಕೊರಮರ ಜಾಣಪ್ಪರವರ ಜಮೀನು, ದಕ್ಷಿಣಕ್ಕೆ ನನಗೆ ಸೇರಿದ ಜಮೀನು. ನಾನು ಮೇಲ್ಕಂಡಂತೆ ಹೇಳಿದ ಚಕ್ಕುಬಂಧಿಯಲ್ಲಿ ದಾವಾ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ. ಶುದ್ಧ ಕ್ರಯ ಪತ್ರವನ್ನು ನಾನು ಮೋಸದಿಂದ ಮಾಡಿಕೊಂಡಿದ್ದರಿಂದ ಅದು ಕಾನೂನಿನ ಅಡಿಯಲ್ಲಿ ಅಸಿಂಧು ದಾಖಲೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ಕ್ರಯ ಪತ್ರಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಒಟ್ಟು ಕುಟುಂಬದ ಆಸ್ತಿ ಆಗಿದ್ದರಿಂದ ವಾದಿಗೆ ಮತ್ತು ಅವರ ಅಣ್ಣ ತಮ್ಮಂದಿರಿಗೆ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆಯೇ ಹೊರತು ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.